ಸಾಕ್ಷಿಯನ್ನು ದಿನಾಂಕ **26-09-2022** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ** ಮುಖ್ಯ ವಿಚಾರಣೆಃ ಶ್ರೀ ಜಿ ಎಂ ಐ ವಕೀಲರಿಂದಃ

ನನ್ನ ಸಹೋದರಿಯರಾದ ಜೆ.ಕುಮಾರಿ ಮತ್ತು ಜೆ.ಕಸ್ತೂರಿ ರವರ ಶಾಲಾ ದಾಖಲಾತಿ ದೃಢೀಕರಣ ಪತ್ರವನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಡಿ 42 ಮತ್ತು 43 ಎಂದು, ನನ್ನ ತಾಯಿಯ ತಂದೆ ದೊರೆಸಾಮಿ ಮೊದಲಿಯಾರ್ ರವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಡಿ 44 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಶ್ರೀ ಟಿ ಎನ್ ಎಸ್ ವಕೀಲರಿಂದಃ

ವಾದಿಗಳು ಯಾವ ಕಾರಣಕ್ಕೆ ನನ್ನ ಸಹೋದರಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದು ತಮ್ಮ ವಾದ ಪತ್ರದಲ್ಲಿ ತಿಳಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾನು ಆ ವಿಚಾರವನ್ನು ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ಕೋಕಿಲಮ್ಮನವರಿಗೆ ಹೆಣ್ಣು ಮಕ್ಕಳು ಇದ್ದಾರೆ ಎಂದು ತಿಳಿಸಿದ್ದಾರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ನೋಂದಣಿ ವಿಭಾಗ ಪತ್ರದಲ್ಲಿ ಹೆಣ್ಣು ಮಕ್ಕಳಿಗೆ ದಾವಾ ಆಸ್ತಿಗಳಲ್ಲಿ ಭಾಗವನ್ನು ತೋರಿಸಿಲ್ಲ. ನಿಡಿ 44 ರಲ್ಲಿ ತೋರಿಸಿರುವ ದೋರೆಸಾಮಿ ಮೊದಲಿಯಾರ್ ರವರಿಗೆ ಏನು ಆದಾಯ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ